

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ನೀಚ ಬುದ್ಧಿಯ ನಾಲಿಗೆ

ತಮಗಾದವರ ಬಗ್ಗೆ ಇಲ್ಲಸಲ್ಲದ ಗಾಳಿಸುದ್ದಿಗಳನ್ನು ಹಬ್ಬಿಸಿ ಅವರನ್ನು ಮಾನಸಿಕವಾಗಿ ಜರ್ಝರಿತರನ್ನಾಗಿ ಮಾಡುವ ಕೆಲವರ ಕೆಟ್ಟ ಚಾಯಮಾನ ಕುರಿತು ಕಳೆದ ವಾರದ ಅಂಕಣದಲ್ಲಿ ಬರೆಯಲಾಗಿದೆ. ದೈನಂದಿನ ಸಂಭಾಷಣೆಯಲ್ಲಿ ಜನರು ಇಂಗ್ಲೀಷಿನ gossip ಮತ್ತು rumour ಶಬ್ದಗಳನ್ನು ಒಂದೇ ಅರ್ಥದಲ್ಲಿ ಬಳಸುವುದು ರೂಢಿಯಲ್ಲಿದೆ. ಆದರೆ ಎರಡಕ್ಕೂ ವ್ಯತ್ಯಾಸವಿದೆ. ಒಂದು ದೃಷ್ಟಿಯಿಂದ ಗಾಸಿಪ್ಪಿನ ಬೇರೊಂದು ರೂಪವೇ ರೂಮರ್ ಎನ್ನಬಹುದಾದರೂ ಗಾಸಿಪ್ಪಿನಲ್ಲಿ ಕೆಲವೊಂದು ಸತ್ಯಾಂಶಗಳಿರುತ್ತವೆ; ಆದರೆ ರೂಮರ್‌ನಲ್ಲಿ ಹಾಗಲ್ಲ. ಅದು ಕೇವಲ ಊಹಾಪೋಹಗಳಿಂದ ಕೂಡಿರುತ್ತದೆ. ನಡೆದುಹೋದ ಘಟನೆಗಳನ್ನು ಕುರಿತು ಗಾಸಿಪ್ ಮಾತುಗಳು ಕೇಳಿಬಂದರೆ ರೂಮರ್‌ನಲ್ಲಿ ಮುಂದಾಗಬಹುದಾದ ಘಟನೆಗಳ ಬಗ್ಗೆ ಊಹಾಪೋಹಗಳು ಹುಟ್ಟಿಕೊಳ್ಳುತ್ತವೆ. ಅವು ಸಮುದ್ರದ ಅಲೆಗಳಂತೆ ಕೇಳುಗರ ಕಿವಿಗಳನ್ನು ಅಪ್ಪಳಿಸಿ ಗಾಬರಿಗೊಳಿಸುತ್ತವೆ. ಗುಳೆ ಹೋಗುವಂತೆ ಮಾಡುತ್ತವೆ. ಜನರ ಸಂತೋಷವನ್ನು ಹಾಳುಮಾಡುತ್ತವೆ.

ವೇದೋಪನಿಷತ್ತುಗಳು, ಶರಣರ ವಚನಗಳು, ದಾಸರ ಕೀರ್ತನೆಗಳು, ಬೈಬಲ್, ಕುರಾನ್‌ಗಳನ್ನು ಆಯಾಯ ಧರ್ಮದವರು ನಿತ್ಯವೂ ಪಾರಾಯಣ ಮಾಡಬಹುದು, ಬಿಡಬಹುದು; ಆದರೆ ಪತ್ರಿಕೆಗಳ ಗಾಸಿಪ್ ಕಾಲಂಗಳನ್ನು ಮಾತ್ರ ಎಲ್ಲರೂ ಬಾಯಿ ಚಪ್ಪರಿಸಿ ತಪ್ಪದೆ ಓದುತ್ತಾರೆ. ತಮಗೆ ಆಗದವರ ಬಗ್ಗೆ ಕೇಳಿಬರುವ ಗಾಸಿಪ್‌ಗಳು ಅವರಿಗೆ ವಿಕೃತಸಂತೋಷವನ್ನುಂಟುಮಾಡುತ್ತವೆ. ಜನರ ಈ ದೌರ್ಬಲ್ಯವನ್ನು ಮನಗಂಡೇ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸವನ್ನು ಮಾಧ್ಯಮಗಳು ಚೆನ್ನಾಗಿ ಮಾಡಿ ತಮ್ಮ TRP ಯನ್ನು ಹೆಚ್ಚಿಸಿಕೊಳ್ಳುತ್ತವೆ. ಜನರ ಈ ಕುತೂಹಲವನ್ನು ತಣಿಸಲು ಮಾಧ್ಯಮಗಳು ಪೈಪೋಟಿಯಿಂದ ಮಾಡುತ್ತಿರುವ ಕೆಸರೆರಚಾಟಕ್ಕೆ ಕಡಿವಾಣವೇ ಇಲ್ಲದಂತಾಗಿದೆ.

ಗಾಸಿಪ್‌ಗಳು ಇನ್ನೊಬ್ಬರ ವೈಯಕ್ತಿಕ ಹಾಗೂ ಖಾಸಗಿ ಬದುಕನ್ನು ಕುರಿತು ಹುಟ್ಟಿಕೊಳ್ಳುವ, ಜನರ ಬಾಯಿಂದ ಬಾಯಿಗೆ ಹರಡುವ ವದಂತಿಗಳು. ಗಾಸಿಪ್ ಮಾತುಗಳು ಜನರಿಗೆ ಬಹಳ ಇಷ್ಟ. 'ನೀವು ಕೇಳಿದರೇನು!' ಎಂದು ಅಚ್ಚರಿ ಮೂಡಿಸಿ ಸಂಭಾಷಣೆಗೆ ಪೀಠಿಕೆ ಹಾಕುವ ಇಂತಹ ಜನರಿಂದ ನೀವು ಎಚ್ಚರದಿಂದಿರುವುದು ಒಳ್ಳೆಯದು. 'ಇಲ್ಲ' ಎಂದರೆ ಸಾಕು ನೀವು ಅವರ ಮಾತಿನ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತೀರಿ. ಇನ್ನೊಬ್ಬರ ಜೀವನದಲ್ಲಿ ಮೂಗು ತೂರಿಸದೆ ನಿಮ್ಮ ಪಾಡಿಗೆ ನೀವು ಇದ್ದರೂ ನಿಮ್ಮನ್ನು ಸುಮ್ಮನೆ ಇರಲು ಅವರು ಬಿಡುವುದಿಲ್ಲ. ಕೆಲವರ ಸ್ವಭಾವ ಹೇಗಿರುತ್ತದೆಯೆಂದರೆ ಅವರ ಬಗ್ಗೆ ನೀವು ಯಾರ ಹತ್ತಿರವೂ ಏನೂ ಮಾತನಾಡದೇ ಇದ್ದರೂ ಅವರು ನಿಮ್ಮ ಮೇಲೆ ವೃಥಾ ದೋಷಾರೋಪಣೆ ಮಾಡುವುದನ್ನು ಬಿಡುವುದಿಲ್ಲ. ನಿಮ್ಮನ್ನು ಕೆಣಕಿ ಸೆಣಸಾಡುವಂತೆ ಮಾಡುತ್ತಾರೆ. ಅವರ ಈ 'ಪಂಥಾಹ್ವಾನ'ಕ್ಕೆ ನೀವು ಸೊಪ್ಪುಹಾಕದೆ ಸುಮ್ಮನಿದ್ದರೆ ಹಳಹಳಿಸುತ್ತಾರೆ. ಹೇಗಾದರೂ ಮಾಡಿ ನಿಮ್ಮ ಮೈಮೇಲೆ ಕೆಂಧೂಳೆರಚಲು ಅವಕಾಶಗಳಿಗಾಗಿ ಹೊಂಚುಹಾಕುತ್ತಿರುತ್ತಾರೆ.

ಕಛೇರಿಗಳಲ್ಲಿ ಮೇಲಧಿಕಾರಿಗಳ ಮತ್ತು ಸಹೋದ್ಯೋಗಿಗಳ ಬಗ್ಗೆ, ಸಂಸಾರದಲ್ಲಿ ಗಂಡ-ಹೆಂಡಿರ ಸಂಬಂಧದ ಬಗ್ಗೆ, ಮದುವೆ ವಯಸ್ಸಿಗೆ ಬಂದ ಯುವಕ-ಯುವತಿಯರ ಬಗ್ಗೆ, ರಾಜಕೀಯದಲ್ಲಿ ಮಂತ್ರಿಮಹೋದಯರು ಮತ್ತು ಶಾಸಕರ ಬಗ್ಗೆ ಗಾಸಿಪ್ ಮಾತುಗಳು ಧಾರಾಳವಾಗಿ ಕೇಳಿಬರುತ್ತವೆ. ಅದರಲ್ಲೂ ಸಿನೆಮಾ ನಟನಟಿಯರು ಮತ್ತಿತರ ಅನೇಕ ಸೆಲೆಬ್ರಿಟಿಗಳ ವೈಯಕ್ತಿಕ ಜೀವನ ಕುರಿತ ಗಾಸಿಪ್‌ಗಳು ಕಾಳ್ಗಿಚ್ಚಿನಂತೆ ಬೇಗನೆ ಹರಡುತ್ತವೆ. ಹದಿಹರೆಯವದವರು ಅಂತಹ ಗಾಸಿಪ್‌ಗಳನ್ನು ಬಾಯಿ ಚಪ್ಪರಿಸಿ ಸವಿಯುತ್ತಾರೆ. ಶಾಲಾಕಾಲೇಜಿನ ಪಠ್ಯಗ್ರಂಥಗಳಲ್ಲಿರುವ ವಿಷಯಗಳಿಗಿಂತ ಇಂತಹ ಗಾಸಿಪ್‌ವಿಷಯಗಳನ್ನು ಮರೆಯದೆ ನೆನಪಿಟ್ಟುಕೊಳ್ಳುತ್ತಾರೆ. ಯಾವ ಅಧ್ಯಾಪಕರೂ ಅವುಗಳನ್ನು ಕುರಿತು ತರಗತಿಯಲ್ಲಿ ಪಾಠಮಾಡದಿದ್ದರೂ ಅಂತಹ ವಿಷಯಗಳಲ್ಲಿ ಅವರಿಗಿರುವ ಪರಿಣತಿ ಅಚ್ಚರಿಯನ್ನುಂಟುಮಾಡುತ್ತದೆ. ಅವುಗಳನ್ನು ಕುರಿತು ಏನಾದರೂ ಪ್ರಶ್ನೆ ಕೇಳಿದರೆ ಥಟ್ಟನೆ ಉತ್ತರ ಕೊಡುತ್ತಾರೆ. ಇಂದಿನ ವಿದ್ಯಾರ್ಥಿಗಳಿಗೆ ಅಂತಹ ವಿಷಯಗಳಲ್ಲಿ ಪರೀಕ್ಷೆಯನ್ನೇನಾದರೂ ಏರ್ಪಡಿಸಿದರೆ ನೂರಕ್ಕೆ ಇನ್ನೂರು ಅಂಕ ಪಡೆಯುವುದರಲ್ಲಿ ಯಾವ ಅನುಮಾನವೂ ಇಲ್ಲ!

ಇಂತಹ ವಿಷಯಗಳನ್ನು ಶಾಲೆಗಳಲ್ಲಿ ಬೋಧಿಸದಿದ್ದರೂ ವಿದ್ಯಾರ್ಥಿಗಳು ಹೇಗೆ ಕಲಿಯುತ್ತಾರೆ? ಅವರ ಮನಸ್ಸಿನಲ್ಲಿ ಈ 'ಪಠ್ಯೇತರ' ಕಲಿಕೆಯು ಹೇಗೆ ಕೆಲಸಮಾಡುತ್ತದೆ? ಇದನ್ನು ಶಿಕ್ಷಣ ತಜ್ಞರು ಆಳವಾಗಿ ಅಧ್ಯಯನ ಮಾಡಿ ಕಂಡುಹಿಡಿದು ಅದರ ತಾಂತ್ರಿಕತೆಯನ್ನು ಶಿಕ್ಷಣಕ್ರಮದಲ್ಲಿ ಅಳವಡಿಸುವ ಪ್ರಯತ್ನ ಮಾಡಿದರೆ ಶಾಲಾಕಾಲೇಜುಗಳಲ್ಲಿ ಯು.ಜಿ.ಸಿ ವೇತನ ಶ್ರೇಣಿಯಂತಹ ದುಬಾರಿ ಸಂಬಳ ಕೊಟ್ಟು ಅಧ್ಯಾಪಕರನ್ನು ನೇಮಿಸಿಕೊಳ್ಳುವ ಅವಶ್ಯಕತೆಯೇ ಬೀಳುವುದಿಲ್ಲವೆಂದು ತೋರುತ್ತದೆ. ಸಂಬಳ ಕೊಡಲು ದುಡ್ಡಿಲ್ಲದೆ ಪರದಾಡುವ ಸರಕಾರಕ್ಕೆ ಇದೊಂದು ದೊಡ್ಡ ವರದಾನವಾಗುತ್ತದೆ!

ಗಾಸಿಪ್‌ಗಿಂತ ರೂಮರ್‌ಗಳು ಹೆಚ್ಚು ಅಪಾಯಕಾರಿ. ರೂಮರ್‌ಗಳು ಬಾಯಿಂದ ಬಾಯಿಗೆ ಹರಡುವ ಕಿಂವದಂತಿಗಳು. ಅವುಗಳಿಗೆ ತಳಬುಡ ಇರುವುದಿಲ್ಲ. ಅದು ಭಾಗಶಃ ಸತ್ಯ ಇರಬಹುದು, ಭಾಗಶಃ ಸುಳ್ಳು

ಇರಬಹುದು. ಅಥವಾ ಪೂರ್ಣಪ್ರಮಾಣದ ಸುಳ್ಳು ಇರಬಹುದು. ಯಾರೂ ಅವುಗಳನ್ನು ಒರೆಹಚ್ಚಿ ನೋಡಲು ಹೋಗುವುದಿಲ್ಲ. ಒಬ್ಬನು ಇನ್ನೊಬ್ಬನಿಗೆ ಹೇಳುವಾಗ ತಾನು ಕೇಳಿದ್ದನ್ನಷ್ಟೇ ಯಥಾವತ್ತಾಗಿ ಹೇಳುವುದಿಲ್ಲ. ಕೇಳುಗನ ಕೆಟ್ಟ ಕುತೂಹಲವನ್ನು ತಣಿಸಲು ಅವನೂ ಒಂದಿಷ್ಟು ಇಲ್ಲಸಲ್ಲದ್ದನ್ನು ಸೇರಿಸಿ ಹೇಳುವ 'ಪುಣ್ಯ'ಕಾರ್ಯ ಮಾಡುತ್ತಾನೆ; ಕಥೆಕಟ್ಟಿ ಒಗ್ಗರಣೆ ಬೆರೆಸಿ ಬೆರಗಿನಿಂದ ಆಲಿಸುವಂತೆ ಹೇಳುತ್ತಾನೆ. ಅದನ್ನು ಕೇಳಿದವನೂ ಸಹ ಇನ್ನೊಬ್ಬನಿಗೆ ಹೇಳುವಾಗ ತನ್ನ ಪಾಲಿನ ಮುಗ್ಗಲು ತುಪ್ಪವನ್ನು ತಪ್ಪದೇ ಸುರಿಯುತ್ತಾನೆ. ಈ ಸರಣಿ ಮುಂದುವರಿದಂತೆ ಸತ್ಯವೆಂಬುದು ಸಾಗರದ ತಳ ಕಚ್ಚಿ ಹೂತುಹೋಗುತ್ತದೆ. ಮೇಲೆ ಗೋಚರಿಸುವುದೆಲ್ಲವೂ ಹಸಿ ಹಸಿ ಸುಳ್ಳು.

ಅನೇಕರಿಗೆ ಗಾಸಿಪ್ ಒಂದು ರೀತಿಯ ಮನರಂಜನೆ. ಗಾಸಿಪ್ ಒಮ್ಮೆ ಆರಂಭಗೊಂಡರೆ ಕೊನೆಯೆಂಬುದಿಲ್ಲ. ಅದು ರಕ್ತಬೀಜಾಸುರನ ಸಂತಾನದಂತೆ ಬೆಳೆಯುತ್ತಾ ಹೋಗುತ್ತದೆ. ಒಂದು ಹಂತದಲ್ಲಿ ಎಲ್ಲರೂ ಎಲ್ಲರ ಬಗ್ಗೆ ದೋಷಾರೋಪಣೆ ಮಾಡುವ ವಿಪರೀತ ಸ್ಥಿತಿ ಬಂದೊದಗಿದರೆ ಆಶ್ಚರ್ಯವೇನಿಲ್ಲ. ಗಾಸಿಪ್ ಮಾಡುವ ವ್ಯಕ್ತಿಯ ಹುಡುಕಾಟದೊಂದಿಗೆ ಸೇಡಿನ ಮನೋಭಾವ ಬೆಳೆದು ಅಶಾಂತಿಗೆ ಕಾರಣವಾಗುತ್ತದೆ. ಗಾಸಿಪ್ ಮಾಡುವವರು ತಾವು ಇನ್ನೊಬ್ಬರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದೇವೆಂಬುದನ್ನು ಮರೆಯುತ್ತಾರೆ. ಅಂತಹ ಗಾಸಿಪ್ಪಿನ ಕೇಂದ್ರಬಿಂದು ತಾವೇ ಆದಾಗ ಅವರ ಮನಸ್ಸಿಗೆ ಆಗುವ ಆಘಾತ ಅಷ್ಟಿಷ್ಟಲ್ಲ. ಆದರೆ ಆ ವೇಳೆಗೆ ಅವರು ಅನೇಕರ ಜೀವನವನ್ನು ಹಾಳುಗೆಡವಿರುತ್ತಾರೆ. ಇದನ್ನರಿತೇ ಪುರಂದರ ದಾಸರು ಹೇಳಿದ್ದು:

**ಆಚಾರವಿಲ್ಲದ ನಾಲಿಗೆ, ನಿನ್ನ ನೀಚಬುದ್ಧಿಯ ಬಿಡು ನಾಲಿಗೆ**
**ವಿಚಾರವಿಲ್ಲದೆ ಪರರ ದೂಷಿಪುದಕ್ಕೆ ಚಾಚಿಕೊಂಡಿರುವಂಥ ನಾಲಿಗೆ!**

**30.8.2012**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**